ದಿನಾಂಕಃ 27.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **3** ನೇ ಪ್ರತಿವಾದಿ ಪರ ಶ್ರೀ ಪಿ ಯು ವಕೀಲರಿಂದಃ

8,000 ಚದುರಡಿಗಳಲ್ಲಿದ್ದ ಯಾವ ಯಾವ ಪ್ಲಾಟ್ ಗಳನ್ನು ಮಾರಾಟ ಮಾಡಲಿಕ್ಕೆ ಪ್ರತಿವಾದಿ 1 , 2 ಮತ್ತು 4 ರವರಿಗೆ ಅನುಮತಿ ಕೊಟ್ಟಿದ್ದೀರಿ ಎಂದರೆ ನನ್ನ ಭಾಗದ ಶೇರ್ ನ ಪ್ಲಾಟ್ ನಂಬರ್ 001 , 002 , 101 , 102 , 103 , 301 , 302 , 303 , 304 , 403 ಮತ್ತು 404 ಮಾರ್ಕೆಟಿಂಗ್ ಮಾಡಲಿಕ್ಕೆ ಅನುಮತಿ ಕೊಟ್ಟಿದ್ದೆ . ಮಾರ್ಕೆಟಿಂಗ್ ಎಂದರೆ ಏನು ಎಂದರೆ ನನ್ನ ಭಾಗದ ಪ್ಲಾಟ್ ಗಳಿಗೆ ಗಿರಾಕಿಗಳನ್ನು ಕರೆದುಕೊಂಡು ಬರಲು ಹೇಳಿದ್ದರು . ನೀವು ಮೇಲೆ ಹೇಳಿದ 11 ಪ್ಲಾಟ್ ಗಳಲ್ಲಿ 002 ಈ ಕೇಸಿನ ಮೂರನೇ ಪ್ರತಿವಾದಿಗೆ ಸೇರಿದ್ದು ಎಂದರೆ ಸರಿ . ಪ್ಲಾಟ್ ನಂಬರ್ 002 ನ್ನು ಡೆವಲಪರ್ ರವರಿಗೆ ಮಾರ್ಕೆಟಿಂಗ್ ಮಾಡಲು ನೀವು ಅನುಮತಿ ನೀಡಿದ ಮೇರೆಗೆ ಅವರು ಈ ದಾವೆಯ ಪ್ರತಿವಾದಿ 3 ರವರನ್ನು ಗಿರಾಕಿಯನ್ನಾಗಿ ಕರೆದುಕೊಂಡು ಬಂದಿದ್ದರು ನಂತರ ನೀವು ಕ್ರಯದ ಕರಾರು ಮತ್ತು ಕ್ರಯಪತ್ರ ಆಗಿರುವುದು ಸಹ ನಿಮಗೆ ಗೊತ್ತಿದೆ ಎಂದರೆ ಸರಿಯಲ್ಲ. ಪ್ರಸ್ತುತ ಈಗ 3 ನೇ ಪ್ರತಿವಾದಿ ಪ್ಲಾಟ್ ನಂಬರ್ 002 ನ್ನು ಖರೀದಿ ಮಾಡಿಕೊಂಡು ಅದರ ಸ್ವಾ ಧೀನದಲ್ಲಿ

ಇದ್ದಾರೆ ಎಂದರೆ ಸರಿ . ಸದರಿ ವಿಚಾರ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಡಿಸೆಂಬರ್ ಕೊನೆಯ ವಾರ 2015 ರಲ್ಲಿ ಗೊತ್ತಾಯಿತು. 3 ನೇ ಪ್ರತಿವಾದಿ ಪ್ಲಾಟ್ ನಂಬರ್ 002 ರ ಗೃಹ ಪ್ರವೇಶ ಮಾಡಿದಾಗ ನೀವು ಹೋಗಿದ್ದೀರಿ ಎಂದರೆ ಸರಿಯಲ್ಲ. ನೀವು ಡೆವಲಪರ್ ನೊಂದಿಗೆ ಎಂ ಓ ಯು ಮಾಡಿಕೊಂಡ ನಂತರವೇ 3 ನೇ ಪ್ರತಿವಾದಿಯ ಕ್ರಯಪತ್ರವಾಗಿತ್ತು ಎಂದರೆ ಸರಿ . ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ನನಗೆ ಸೇರಿದ ಪ್ಲಾಟ್ ನಂಬರ್ 002 ನ್ನು ಡೆವಲಪರ್ ಗೆ ಸೇರಿದ್ದು ಎಂದು ಬಾವಿಸಿ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದೀರಿ ಆ ರೀತಿ 3 ನೇ ಪ್ರತಿವಾದಿಯ ಕ್ರಯಪತ್ರದಲ್ಲಿ ನಮೂದಾಗಿಲ್ಲ ಎಂದು ಸಾಕ್ಷಿಗೆ ನಿಪಿ 35 ಕ್ರಯಪತ್ರವನ್ನು ತೋರಿಸಲಾಗಿ ಸಾಕ್ಷಿ ನಿಪಿ 35 ನ್ನು ಪರಿಶೀಲಿಸಿ ಸರಿ ಎಂದು ಹೇಳುತ್ತಾರೆ .

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಿಶಾ ರಾಣಿ ಎ. ಸಿ)
III ನೇ ಎ.ಸಿ.ಸಿ & ಎಸ್.ಜೆ,
ಬೆಂಗಳೂರು.